11. ಆಮ್ಮೀಟರ್ ಮತ್ತು ವೋಲ್ಟ್ ಮೀಟರ್‌ಗಳನ್ನು ಮಂಡಲಕ್ಕೆ ಕ್ರಮವಾಗಿ ಹೀಗೆ ಜೋಡಿಸಿರುತ್ತಾರೆ . [ಸಾ]

A. ಎರಡನ್ನೂ ಸಮಾಂತರ ಜೋಡಣೆಯಲ್ಲಿ B.ಸರಣಿ ಕ್ರಮದಲ್ಲಿ ಹಾಗೂ ಸಮಾಂತರ ಜೋಡಣೆಯಲ್ಲಿ

C. ಎರಡನ್ನೂ ಸರಣಿಕ್ರಮದಲ್ಲಿ C.ಸಮಾಂತರ ಜೋಡಣೆಯಲ್ಲಿ ಹಾಗೂ ಸರಣಿ ಕ್ರಮದಲ್ಲಿ

12. ಕೆಳಗಿನವುಗಳಲ್ಲಿ ಓಮ್‌ನ ನಿಯಮಕ್ಕೆ ಅನ್ವಯವಲ್ಲದ ಸೂತ್ರ [ಸಾ]

A. V/I = R B. V = IR C. I = V/R D. V = I/R

13. 2 Ω ಮತ್ತು 4 Ω ರೋಧವುಳ್ಳ ರೋಧಕಗಳನ್ನು ಸರಣಿಯಲ್ಲಿ ಜೋಡಿಸಿ ನಂತರ ಅದಕ್ಕೆ 4 Ω ರೋಧವುಳ್ಳ ರೋಧಕವನ್ನು ಸಮಾಂತರವಾಗಿ ಜೋಡಿಸಿದಾಗ ಉಂಟಾಗುವ ಒಟ್ಟು ರೋಧವು [ಕ]

A. 2Ω B. 2.4 Ω C. 4 Ω D. 10Ω

14. ಒಂದು ವಾಹಕದ ರೋಧವು 27Ω ಆಗಿದೆ. ಆ ವಾಹಕವನ್ನು ಮೂರು ಸಮಭಾಗಗಳಾಗಿ ಮಾಡಿ ಸಮಾಂತರವಾಗಿ ಜೋಡಿಸಿದಾಗ ಅದರ ಒಟ್ಟು ರೋಧವು

A. 6Ω B. 3 Ω C. 9 Ω D. 27Ω (Main-2019) [ಕ]

15. 2 Ω ಮತ್ತು 3 Ω ರೋಧವುಳ್ಳ ರೋಧಕಗಳನ್ನು ಸಮಾಂತರವಾಗಿ ಜೋಡಿಸಿ ಅದಕ್ಕೆ 2Ω ರೋಧವುಳ್ಳ ರೋಧಕವನ್ನು ಸರಣಿಯಲ್ಲಿ ಜೋಡಿಸಿದಾಗ ಉಂಟಾಗುವ ನಿವ್ವಳ ರೋಧ [ಕ]

A. 3.2 Ω B. 2 Ω C. 3 Ω D. 1 Ω

16. R ರೋಧವನ್ನು ಹೊಂದಿರುವ ಒಂದು ಲೋಹದ ತಂತಿಯನ್ನು ಮೂರು ಸಮಭಾಗಗಳಾಗಿ ಕತ್ತರಿಸಿದೆ. ನಂತರ ಈ ಭಾಗಗಳನ್ನು ಸಮಾಂತರವಾಗಿ ಸಂಪರ್ಕಿಸಲಾಗಿದೆ. ಈ ಸಂಯೋಜನೆಯ ಒಟ್ಟು ರೋಧವು $R_1$ ಆದರೆ $R : R_1$ ನ ಬೆಲೆ **( June-2019)** [ಕ]

A. 1:3 B. 1:9 C. 9:1 D. 3:1

17. 6 V ವಿಭವಾಂತರ ಹೊಂದಿರುವ 2 ಬಿಂದುಗಳ ನಡುವೆ 24 J ಗಳಷ್ಟು ಕೆಲಸ ನಡೆದರೆ ಆ ಎರಡು ಬಿಂದುಗಳ ನಡುವೆ ಚಲಿಸಿದ ಆವೇಶಗಳ ಸಂಖ್ಯೆ (C-ಕೂಲಮ್) [ಕ]

A. 2 C B. 4 C C. 6 C D. 10 C

18. 4V ವಿಭವಾಂತರ ಹೊಂದಿರುವ 2 ಬಿಂದುಗಳ ನಡುವೆ 10 ಕೂಲಮ್‌ನಷ್ಟು ಆವೇಶಗಳು ಪ್ರವಹಿಸಿದರೆ, ನಡೆದ ಕೆಲಸದ ಪ್ರಮಾಣ [ಕ]

A. 10 J B. 20 J C. 40 J D. 30 J

19. 30Ω ರೋಧ ಹೊಂದಿರುವ ಒಂದು ವಿದ್ಯುತ್ ದೀಪ ಮತ್ತು 6Ω ರೋಧವನ್ನು ಹೊಂದಿರುವ ವಾಹಕವನ್ನು ಸರಣಿಯಲ್ಲಿ 9V ನ ಶುಷ್ಕಕೋಶಕ್ಕೆ ಚಿತ್ರದಲ್ಲಿರುವಂತೆ ಜೋಡಿಸಲಾಗಿದೆ . ಮಂಡಲದಲ್ಲಿ ಪ್ರವಹಿಸುತ್ತಿರುವ ಒಟ್ಟು ವಿದ್ಯುತ್‌ಪ್ರವಾಹ **(Main-2021)** [ಕ]




A. 4 A B. 36 A C. 0.25 A D. 0.6 A

20. ವಾಹಕದಲ್ಲಿ ಹರಿಯುವ ವಿದ್ಯುತ್ ಪ್ರವಾಹ 4 A ಆಗಿದ್ದಾಗ ರೋಧವು 12 Ω ಆಗಿರುತ್ತದೆ. ರೋಧವನ್ನು ದ್ವಿಗುಣಗೊಳಿಸಿದರೆ ವಿದ್ಯುತ್ ಪ್ರವಾಹದ ದರವು [ಕ]

A. 2 A B. 3 A C. 4 A D. 8 A

LIVEWORKSHEETS